# 'ಸ್ಫೂರ್ತಿ ತುಂಬುವ ಗಟ್ಟಿಗಿತ್ತಿ ಸ್ವಾತಿ

■ ರಾಘವೇಂದ್ರ ಕೆ.



**ಭಾವನಾ ಸ್ಟಾರ್ ಸುವರ್ಣದ 'ವಸುದೇವ ಕುಟುಂಬ' ಸ್ವಾತಿ**

◆ **ಸ್ವಾತಿ ಪಾತ್ರದ ಮಹತ್ವ ಏನು?**

ಇದು ಅನೇಕ ಹೆಣ್ಣುಮಕ್ಕಳಿಗೆ ಸ್ಫೂರ್ತಿಯನ್ನು ತುಂಬುವಂತಿದೆ. ಹೆಣ್ಣುಮಕ್ಕಳೇ ಇರುವ ಮನೆಯಲ್ಲಿ ಆಕೆ ಅನಿವಾರ್ಯತೆಗೆ ಕುಟುಂಬದ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಾಳೆ. ಮಾತ್ರವಲ್ಲ, ಎಂತಹ ಕಷ್ಟಗಳು ಎದುರಾದರೂ ಧೈರ್ಯವಾಗಿ ಎದುರಿಸುತ್ತಾಳೆ. ಇಂತಹ ಗುಣ ಪ್ರತಿ ಹೆಣ್ಣಿನಲ್ಲಿಯೂ ಇರಬೇಕು ಎಂದು ಅನ್ನಿಸುತ್ತದೆ. ಈ ಪಾತ್ರದ ನಿರ್ವಹಣೆ ಕೂಡ ತುಂಬ ಖುಷಿ ಕೊಡುತ್ತದೆ. ಸ್ವಾತಿ ಸ್ವಲ್ಪ ನನ್ನ ವ್ಯಕ್ತಿತ್ವಕ್ಕೆ ಹೊಂದಿಕೆ ಆಗುವುದರಿಂದ, ಅಭಿನಯಿಸಲು ಕಷ್ಟ ಎಂದು ಅನ್ನಿಸಿದ್ದೇ ಇಲ್ಲ. ಇದನ್ನು ನೋಡಿದ ವೀಕ್ಷಕರಿಗೆ ತಾವೂ ಹೀಗಾಗಬೇಕು ಎಂದುಕೊಂಡರೂ ಸಾರ್ಥಕ.

◆ **'ವಸುದೇವ ಕುಟುಂಬ' ನೋಡಿದರೆ ಹೇಗೆನಿಸುತ್ತದೆ?**

ಬಹುತೇಕ ಕಥೆಗಳು ಪ್ರೇಮವನ್ನು ಕೇಂದ್ರೀಕರಿಸಿರುತ್ತವೆ. ಇದು ಹೆಣ್ಣುಮಕ್ಕಳ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುತ್ತದೆ. ಅವಿನಾಶ್ ಅವರ ಮಗಳ ಪಾತ್ರವನ್ನು ಮಾಡುತ್ತಿರುವುದೇ ಅದೃಷ್ಟ ಎಂದುಕೊಂಡಿದ್ದೇನೆ. 'ವಸುದೇವ ಕುಟುಂಬ' ನಾಯಕ ಅಥವಾ ನಾಯಕಿ ಕೇಂದ್ರಿತ ಕಥೆ ಆಧಾರಿತವಲ್ಲ. ಸಮಕಾಲೀನ ಸಂದರ್ಭದಲ್ಲಿ ನಡೆಯುವ ವಂಚನೆಯ ಸ್ವರೂಪವನ್ನು ತಿಳಿಸುತ್ತದೆ. ಅದನ್ನು ಹೇಗೆ ನಿಭಾಯಿಸಬೇಕು ಎನ್ನುವುದೂ ಮುಖ್ಯ ಆಗುತ್ತದೆ. ಚಿಕ್ಕಮಗಳೂರಿನ ನೈಸರ್ಗಿಕ ಸೌಂದರ್ಯವನ್ನು ಸೆರೆಹಿಡಿದಿರುವುದು ಚೆನ್ನಾಗಿದೆ.

◆ **ಬಣ್ಣ ಹಚ್ಚಿದ್ದು ಹೇಗೆ? ಇಷ್ಟದ ಪಾತ್ರ ಯಾವುದು?**

ನಟನೆಗೆ ಹೊಸದಾಗಿ ಪ್ರವೇಶ ಮಾಡಿದ್ದೇನೆ. ತೆಲುಗಿನಲ್ಲಿಯೂ ಒಂದು ಪಾತ್ರ ಮಾಡುತ್ತಿದ್ದೇನೆ. ಉದ್ಯೋಗದಲ್ಲಿದ್ದೆ ಅದನ್ನು ಬಿಟ್ಟು ಆಕಸ್ಮಿಕವಾಗಿ ಬಂದಿದ್ದೇನೆ. ಪೌರಾಣಿಕ ಹಿನ್ನೆಲೆಯ ಪಾತ್ರಗಳನ್ನು ಮಾಡಬೇಕು ಎನ್ನುವ ಆಸೆ ಇದೆ. ಕನಸಿನಲ್ಲೂ ಈ ಕ್ಷೇತ್ರಕ್ಕೆ ಬರುತ್ತೇನೆ ಎಂದುಕೊಂಡಿರಲಿಲ್ಲ. ಅಪ್ಪನ ಪ್ರೋತ್ಸಾಹವೇ ಬಣ್ಣ ಹಚ್ಚಲು ಕಾರಣ. ಅವರು ನಟ ಆಗಬೇಕು ಎಂದುಕೊಂಡಿದ್ದರಂತೆ, ಅದಾಗಿರಲಿಲ್ಲ. ಆಡಿಷನ್ ನೀಡಲು ನನಗೆ ಕರೆ ಬಂದಾಗ, ಒತ್ತಾಯದಿಂದ ಕಳಿಸಿದರು. ನೀಡಿದ್ದು ಒಂದೇ ಆಡಿಷನ್, ಅವಕಾಶ ಸಿಕ್ಕೇಬಿಟ್ಟಿತು. ಏಕೆ ಇದನ್ನು ತಪ್ಪಿಸಿಕೊಳ್ಳಬೇಕು ಎಂದು ಮಾಡಿದೆ.

◆ **ಟೀವಿಗಳಲ್ಲಿ ಖಳನಾಯಕಿಯ ವಿಜೃಂಭಣೆ ಬಗ್ಗೆ ಏನು ಹೇಳ್ತೀರಿ?**

ಜೀವನದಲ್ಲಿ ನಿತ್ಯವೂ ಪಾಸಿಟಿವ್ ಮತ್ತು ನೆಗೆಟಿವ್ ಎರಡೂ ಅಂಶವನ್ನು ನೋಡುತ್ತೇವೆ. ಧಾರಾವಾಹಿ, ಸಿನಿಮಾಗಳಲ್ಲಿ ಆ ಎರಡೂ ಸಂಗತಿಗಳನ್ನು ನಿರೂಪಿಸುತ್ತಾರೆ. ಒಂದೇ ರೀತಿ ಇದ್ದರೆ ಚೆನ್ನಾಗಿರಲ್ಲ. ಕಥೆ ಯಾವತ್ತೂ ಕಪ್ಪು–ಬಿಳುಪಿನಂತೆ ಇರಬಾರದು. ಸಮಾಜದ ಎಲ್ಲ ಸಂಗತಿಗಳೂ ಇರಬೇಕು. ನಟರ ದೃಷ್ಟಿಯಲ್ಲಿ ನೋಡಿದಾಗ ನೆಗೆಟಿವ್ ಪಾತ್ರಗಳನ್ನು ಮಾಡುವುದು ದೊಡ್ಡ ಸವಾಲಿನ ಕೆಲಸ. 'ವಸುದೇವ ಕುಟುಂಬ' ಸೀರಿಯಲ್ ಖಳನಟರು ತುಂಬ ಮೃದು ಸ್ವಭಾವದ ವ್ಯಕ್ತಿತ್ವದವರು. ಒಟ್ಟಾರೆ ನೆಗೆಟಿವ್ ಪಾತ್ರ ನಿರ್ವಹಣೆ ಕಷ್ಟದ ಕೆಲಸ ಕೂಡ. ಅಂತಹ ಪಾತ್ರ ನನಗೆ ಸಿಕ್ಕರೆ ಅದಕ್ಕೆ ನ್ಯಾಯ ಕೊಡಲು ಶ್ರಮಿಸುತ್ತೇನೆ. ಸಾಮಾನ್ಯವಾಗಿ ವೀಕ್ಷಕರು ಬೈದುಕೊಳ್ಳುತ್ತಾರೆ. ಆದರೂ ಅದನ್ನು ಇಷ್ಟಪಟ್ಟು ನೋಡುತ್ತಾರೆ. ಟೀವಿಗಳು ಅದಕ್ಕೆ ಪರಿಹಾರ ನೀಡುತ್ತವೆ ಎಂದೇನೂ ಇಲ್ಲ. ಸಮಸ್ಯೆಯನ್ನು ಹೇಗೆ ಎದುರಿಸಬೇಕು ಎನ್ನುವ ಸಂಗತಿಯನ್ನು ತಿಳಿಸುತ್ತವೆ.

◆ **ಬಾಲ್ಯದ ದಿನಗಳು ಹೇಗಿದ್ದವು? 'ಸುಧಾ' ಓದುತ್ತೀರಾ?**

ಬಾಲ್ಯದಲ್ಲಿ ತುಂಬ ಎಂಜಾಯ್ ಮಾಡಿದ್ದೇನೆ. ಶಾಲೆಯಲ್ಲಿ ಓದುವುದರಲ್ಲಿ ಮಾತ್ರವಲ್ಲ, ಪ್ರತಿಯೊಂದರಲ್ಲೂ ಮುಂದೆ ಇರುತ್ತಿದ್ದೆ. ಸ್ಕಿಟ್, ಡಾನ್ಸ್, ಕ್ರೀಡೆ ಯಾವುದೇ ಇದ್ದರೂ ಭಾಗಿಯಾಗುತ್ತಿದ್ದೆ. ಚಿಕ್ಕ ವಯಸ್ಸಿನಿಂದಲೂ ಓದುವುದು ತುಂಬ ಇಷ್ಟ. ಆಗಲೇ ನಾನು ಕಾದಂಬರಿಗಳನ್ನು ಓದಲು ಶುರು ಮಾಡಿದೆ. ಮನೆಗೆ ಅಮ್ಮ 'ಸುಧಾ' ತರಿಸುತ್ತಿದ್ದರು. ಅದರಲ್ಲಿನ ಕಾರ್ಟೂನ್ ನನಗೆ ಇಷ್ಟ ಆಗುತ್ತಿತ್ತು. ಆಹಾರ ವೈವಿಧ್ಯವನ್ನು ನೋಡಿ ಅಮ್ಮನಿಗೆ ಮಾಡಿಕೊಡಲು ಕೇಳುತ್ತಿದ್ದೆ. ಅದರಲ್ಲಿ ಬರುತ್ತಿದ್ದ ನಗೆಬರಹಗಳನ್ನು ಓದುತ್ತಿದ್ದೆ. ಎಳೆಯರ ಅಂಗಳ ವಿಭಾಗ, ಆರೋಗ್ಯ ಟಿಪ್ಸ್ ತುಂಬ ಪ್ರಯೋಜನವಾಗುತ್ತಿತ್ತು. ಇತ್ತೀಚೆಗೆ ಓದಲು ಸಮಯ ಆಗುತ್ತಿಲ್ಲ. ಮತ್ತೆ ಓದಬೇಕು ಎನ್ನುವ ಬಯಕೆ ಇದೆ.

■